# “ಶ್ರೀಕಾವೇರಿ ವೈಭವ”

## ರಚನೆ

## ಶ್ರೀ ಜಿ.ಎನ್. ಜಯತೀರ್ಥಾಚಾರ್ಯರು

(ಶ್ರೀ ವ್ಯಾಸರಾಜ ಮಠಾಧೀಶರಾಗಿದ್ದ
ಶ್ರೀವಿದ್ಯಾವಾಚಸ್ಪತಿತೀರ್ಥರು ತಮ್ಮ ಪೂರ್ವಾಶ್ರಮದಲ್ಲಿ

ಏಕದೈವ ಸಮುದ್ಭೂತಾ: ಪಯೋಬ್ಧೇ: ಕತಿಶೀಕರಾ: ।
ತತ್ಸಂಖ್ಯಾತೀರ್ಥ ತೋಯೌಘಂ ವಹತ್ಯದ್ಧಾ ಕವೇರಜಾ ॥

ಕ್ಷೀರಸಮುದ್ರದಿಂದ ಒಂದೇ ಕಾಲದಲ್ಲಿ ಎಷ್ಟು ತುಂತುರು ಹನಿಗಳು ಬರಬಹುದೋ, ಅಷ್ಟು ಸಂಖ್ಯಾಕ ತೀರ್ಥಸಮೂಹವನ್ನು ಈ ಕಾವೇರಿ ಧರಿಸಿರುವಳು.

ಕಾವೇರೀ ವೀಚಯೋನದ್ಯ: ಅವರ್ತಾಶ್ಚ ಜಲಾಶಯಾ: ।
ದೇವತಾವಾಲುಕಾಸ್ತಸ್ಯಾಸ್ಸರ್ವತೀರ್ಥಾಧಿಕಾ ಚ ಸಾ ॥

ಕಾವೇರಿ ನದಿಯಲ್ಲಿರುವ ಅಲೆಗಳೇ ಪುಣ್ಯನದಿಗಳು, ಸುಳಿಗಳೇ ಪುಣ್ಯಜಲಾಶಯಗಳು, ಕಾವೇರಿಯಲ್ಲಿರುವ ಮರಳುಗಳೆಲ್ಲಾ ದೇವತೆಗಳು, ಆದುದರಿಂದ ಕಾವೇರಿ ಸರ್ವತೀರ್ಥಗಳಿಗಿಂತ ಅಧಿಕಳು.

ತುಲಾಮಾಸೇತು ಕಾವೇರೀಂ ಪ್ರಶಂಸಂತಿಮಹರ್ಷಯ: ।
ದಿವಿದೇವಾಶ್ಚ ಪಿತರ: ಸಾದುಸಾಧ್ವಿತಿ ಹರ್ಷಿತಾ: ॥

ತುಲಾಮಾಸದಲ್ಲಿ ಕಾವೇರಿಯನ್ನು ಮಹರ್ಷಿಗಳು ಶ್ಲಾಘಿಸುತ್ತಾರೆ, ದೇವತೆಗಳೂ, ಪಿತೃಗಳೂ, ಸಾಧುಗಳೂ ಹರ್ಷಯುತರಾಗಿ ಹೊಗಳುತ್ತಾರೆ.

ಕಾವೇರೀ ತೀರಜನ್ಮಾನೋ ಮೃಗಪಕ್ಷಿಮಹೀರುಹಾ: ।
ತದ್ವಾರಿಶೀತವಾತೈಶ್ಚ ಸ್ಪೃಷ್ಟ್ವಾ ಮುಕ್ತಿಂ ಪ್ರಯಾಂತಿ ಹಿ ।

ಕಾವೇರಿ ತೀರದಲ್ಲಿ ಹುಟ್ಟಿರುವ, ಮೃಗಗಳು, ಪಕ್ಷಿಗಳು, ವೃಕ್ಷಗಳೂ ಆ ಕಾವೇರಿಯ ನೀರಿನಿಂದಲೂ, ತಣುವಾದ ಗಾಳಿಯಿಂದಲೂ ಮುಟ್ಟಲ್ಪಟ್ಟವರಾಗಿ ಉತ್ತಮಗತಿಯನ್ನು ಹೊಂದುವರೆಂಬುದು ಪ್ರಸಿದ್ಧವಾಗಿದೆ.

ತುಲಾಯಾಂ ಸಹ್ಯಜಾಸ್ನಾನುನ್ಮುಕ್ತಿರೇವ ನ ಸಂಶಯ: ।
ತಿಸ್ರ:ಕೋಟ್ಯರ್ಧಕೋಟ್ಯಶ್ಚ ತೀರ್ಥಾನಿ ಭುವನತ್ರಯೇ ।
ತಾನಿಸರ್ವಾಣಿ ರಾಜೇಂದ್ರ ಪುರಸ್ಕೃತ್ಯ ತು ಜಾಹ್ನವೀಂ ॥
ಕೇಶವಸ್ಯಾಜ್ಞಯಾ ಯಾಂತಿ ತುಲಾಮಾಸೇ ಮರುದ್ವೃಧಾಂ ॥

ತುಲಾಮಾಸದಲ್ಲಿ ಕಾವೇರೀ ಸ್ನಾನ ಮಾಡುವುದರಿಂದ ಮುಕ್ತಿಯಾಗುವುದು. ಈ ಮೂರೂ ಲೋಕಗಳಲ್ಲಿರುವ ಮೂರೂವರೆ ಕೋಟಿ ತೀರ್ಥಾಭಿಮಾನಿ ದೇವತೆಗಳೂ ಗಂಗಾದೇವಿಯನ್ನು ಮುಂದು ಮಾಡಿಕೊಂಡು ಶ್ರೀ ಹರಿಯ ಆಜ್ಞಾನುಸಾರ ತುಲಾಮಾಸದಲ್ಲಿ ಕಾವೇರಿಗೆ ಬಂದಿರುತ್ತಾಳೆ.

ತುಲಾಮಾಸೇ ಸಕೃತ್ಸ್ನಾತಿಯ: ಕವೇರಸುತಾಜಲೇ ।
ಪ್ರಭಾತೇ ಪತಿತೋವಾಪಿ ವಿಷ್ಣುಲೋಕೇ ಮಹೀಯತೇ ।

ತುಲಾಮಾಸದಲ್ಲಿ ಯಾವ ಪತಿತನೂ ಕೂಡ ಪ್ರಾತ: ಕಾವೇರಿ ಸ್ನಾನ ಮಾಡುವನೋ ಅವನೂ ಸಹ ವಿಷ್ಣುಲೋಕವನ್ನು ಹೊಂದಿ ಸುಖಪಡುವನು.

ಕಾವೇರಿ ಕಪಿಲಾಸಂಗಂ ಸಂಸ್ಮರನ್ನನ್ಯವಾರಿಷು ।
ತಸ್ಮಿನ್ ಸ್ನಾನಫಲಂ ಪ್ರಾಪ್ಯ ಸರ್ವಪಾಪೈ: ಪ್ರಮುಚ್ಯತೇ ॥

ಇತರ ನೀರಿನಲ್ಲಿ ಸ್ನಾನ ಮಾಡುವಾಗಲೂ ಕಾವೇರಿ ಕಪಿಲಾ ಸಂಗಮವನ್ನು ಸ್ಮರಿಸಿದ ಮಾತ್ರದಿಂದಲೇ ಸರ್ವಪಾಪಮುಕ್ತನಾಗಿ ಆ ಸಂಗಮ ಸ್ನಾನ ಫಲವನ್ನೂ ಪಡೆಯುವನು.

**ಕಾವೇರ್ಯಾಂ ಸ್ನಾತಿಯೋ ಮೂಢ: ಶ್ರೀರಂಗೇಶಸ್ಯ ಸನ್ನಿಧೌ ।**
**ಬ್ರಹ್ಮಘ್ನೋವಾ ಸುರಾಪೋವಾ ಸರ್ವಪಾಪೈ: ಪ್ರಮುಚ್ಯತೇ ॥**

ಬ್ರಹ್ಮಹತ್ಯಾ, ಸುರಾಪಾನಾದಿಗಳನ್ನು ಮಾಡಿದ ಮೂಢನೂ ಸಹ ಶ್ರೀರಂಗನಾಥನ ಸನ್ನಿಧಾನದಲ್ಲಿ ಕಾವೇರಿ ಸ್ನಾನ ಮಾಡುವುದರಿಂದ ಶುದ್ಧನಾಗುವನು

**ಶ್ರೀರಂಗೇವಾಪಿ ಸಂಗೇವಾ ಮಾಯೂರೇವಾಪಿ ಪಾಪಧೀ: ।**
**ತುಲಾರ್ಕೇ ಸ್ನಾತಿ ಶುದ್ಧಾತ್ಮಾ ಬ್ರಹ್ಮಲೋಕೇ ಮಹೀಯತೇ ॥**

ತುಲಾಮಾಸದಲ್ಲಿ ಶ್ರೀರಂಗನಾಥನ ಸನ್ನಿಧಾನದಲ್ಲಾಗಲೀ, ಕಾವೇರಿಯ ಸಂಗಮಸ್ಥಳದಲ್ಲಾಗಲೀ, ಶ್ರೀ ಮಾಯೂರಕ್ಷೇತ್ರದಲ್ಲಾಗಲೀ (ಮಾಯಾವರಂ) ಸ್ನಾನ ಮಾಡುವುದರಿಂದ ಪಾಪಿಷ್ಟನೂ ಶುದ್ಧನಾಗಿ ಬ್ರಹ್ಮಲೋಕವನ್ನು ಪಡೆಯುವನು

**ಕಾವೇರೀ ಮಹಿಮಾಲೇಶ: ಸೂಚಿತೋತ್ರಮಯಾತವ ।**
**ಪಠೇದ್ವಾ ಪುನ್ಯಕಾವೇರ್ಯಾ ಮಾಹಾತ್ಮ್ಯಂ ಶ್ರುಣುಯಾಶ್ಚಯ: ।**
**ನಾಮಂಗಲಂ ನ ದಾರಿದ್ರ್ಯಂ ತಸ್ಯವಂಶೇ ಕದಾಚನ ॥**

ಕಾವೇರಿಯ ಮಹಿಮೆಯನ್ನು ಸ್ವಲ್ಪಭಾಗ ಮಾತ್ರ ಇಲ್ಲಿ ಸೂಚಿಸಲಾಗಿದೆ. ಪುಣ್ಯಕರವಾದ ಕಾವೇರಿ ಮಹಿಮೆ-ವೈಭವಗಳನ್ನು ಯಾರು ಹೇಳುತ್ತಾರೋ, ಕೇಳುತ್ತಾರೋ ಅವರಿಗೆ ಏಳು ಜನ್ಮಗಳಲ್ಲಿ ಸಂಪಾದಿಸಿದ ಪಾಪಗಳೂ

ತಕ್ಷಣದಲ್ಲಿ ನಾಶವಾಗಿ ಅವರ ವಂಶದಲ್ಲಿ ದಾರಿದ್ರ್ಯವೂ ಅಮಂಗಳವೂ ಇಲ್ಲದೇ ಸರ್ವದಾ ಮಂಗಳವನ್ನು ಹೊಂದುವರು

**ಲೋಕಾಸ್ಸಮಸ್ತಾ: ಸುಖಿನೋರ್ಭವಂತು ॥ ಶ್ರೀ ಕೃಷ್ಣಾರ್ಪಣಮಸ್ತು ॥**